# ಮೈಸೂರು ವಿಶ್ವವಿದ್ಯಾನಿಲಯ

**ದಿನಾಂಕ 15–02–2020ರ ಶನಿವಾರದಂದು ಪೂರ್ವಾಹ್ನ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡಾವಳಿ.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಜಿ. ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು,<br>ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.<br>ಇವರ ಪರವಾಗಿ ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಡಾ. ಎಸ್. ಮದಿಅಳಗನ್ | ಸದಸ್ಯರು |
| 4. | ಶ್ರೀಮತಿ ಸಹನಾ ಶಿವಪ್ಪ | ಸದಸ್ಯರು |
| 5. | ಶ್ರೀ ಸಿ. ಜಯರಾಮ | ಸದಸ್ಯರು |
| 6. | ಡಾ. ಕೆ.ಕೆ. ವಿಶಾಲಾಕ್ಷಿ | ಸದಸ್ಯರು |
| 7. | ಶ್ರೀ ದಿನೇಶ್ ಎಂ. ಗಾವಂಕರ್ | ಸದಸ್ಯರು |
| 8. | ಶ್ರೀ ಆರ್. ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 9. | ಪ್ರೊ. ಎಸ್.ಡಿ. ದೊಡ್ಡಚಾರಿ | ಸದಸ್ಯರು |
| 10. | ಶ್ರೀಮತಿ ಸಿಂಧು ಸುರೇಶ್ | ಸದಸ್ಯರು |
| 11. | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 12. | ಡಾ. ಎಂ.ಎಸ್. ದಾಮೋದರ | ಸದಸ್ಯರು |
| 13. | ಪ್ರೊ. ಕೆ.ಎಂ. ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 14. | ಪ್ರೊ. ಟಿ.ಎಸ್. ದೇವರಾಜ, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 15. | ಪ್ರೊ. ಆರ್. ಶಿವಪ್ಪ | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಡಾ. ಸೈಯದ್‌ಕಾರ್‍ಝು ಮೊಹಿದ್ದೀನ್, ಸಿಂಡಿಕೇಟ್ ಸದಸ್ಯರು.
6. ಶ್ರೀ ಟಿ. ರಾಮಕೃಷ್ಣ, ಪ್ರಾಂಶುಪಾಲರು, ಎ.ಡಿ. ಬಿಳಿಗೌಡ ಪ್ರಥಮದರ್ಜೆ ಕಾಲೇಜು, ಕೊಪ್ಪ, ಮದ್ದೂರು ತಾಲ್ಲೂಕು, ಮಂಡ್ಯಜಿಲ್ಲೆ.

ಮೊದಲಿಗೆ ಇತ್ತೀಚೆಗೆ ನಿಧನರಾದ ವಿಶ್ವವಿದ್ಯಾನಿಲಯಗಳ ಮಾಜಿ ಸಮಕುಲಾಧಿಪತಿಗಳು ಹಾಗೂ ಉನ್ನತ ಶಿಕ್ಷಣ ಸಚಿವರಾದ ಶ್ರೀ ಡಿ. ಮಂಜುನಾಥ್‌ರವರು ನಿಧನರಾದ ಹಿನ್ನೆಲೆಯಲ್ಲಿ ಮೃತರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಹೊಸದಾಗಿ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದ್ಯಸರನ್ನು ಸ್ವಾಗತಿಸಿ ಪರಿಚಯಿಸಿದರು.

1. ಶ್ರೀ ದಿನೇಶ್ ಎಂ. ಗಾವಂಕರ್, ಪ್ರಾಂಶುಪಾಲರು, ಸೆಂಟ್ ಜೋಸೆಫ್ ಕಾಲೇಜು, ಹಾಸನ.
2. ಶ್ರೀ ಟಿ. ರಾಮಕೃಷ್ಣ, ಪ್ರಾಂಶುಪಾಲರು, ಎ.ಡಿ. ಬಿಳಿಗೌಡ ಪ್ರಥಮದರ್ಜೆ ಕಾಲೇಜು, ಮದ್ದೂರು ತಾಲ್ಲೂಕು, ಮಂಡ್ಯ.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| | |
|---|---|
| ವಿಷಯ ಸಂಖ್ಯೆ: I | ದಿನಾಂಕ 17–01–2020ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 17–01–2020ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸಲಾಯಿತು. |
| ವಿಷಯ ಸಂಖ್ಯೆ: II | ದಿನಾಂಕ 23–10–2019ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮಕೈಗೊಂಡ ವರದಿ. |
| **ತೀರ್ಮಾನ** | ಗಮನಿಸಲಾಯಿತು. |
| **2020/2.1** | Chirashree Institute of Research and Development (CIRD), Bengaluru ಇವರಿಗೆ ಹೊಸದಾಗಿ 1. Commerce 2. Computer Science 3. Library Science ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ– ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯಾನುಸಾರ ಕ್ರಮಕೈಗೊಂಡಿರುವ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | Chirashree Institute of Research and Development (CIRD), Bengaluru ಇವರಿಗೆ ಹೊಸದಾಗಿ 1. Commerce 2. Computer Science 3. Library Science ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಸಂಬಂಧ ಪರಿವೀಕ್ಷಣಾ ಸಮಿತಿ ಭೇಟಿ ನೀಡಿ ಸಲ್ಲಿಸಿರುವ ವರದಿಯಾನುಸಾರ ಕ್ರಮಕೈಗೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| **2020/2.2** | ಶ್ರೀ. ರಾಜಣ್ಣ. ಎಲ್ ಇವರಿಗೆ ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆಗೆ ಸಂಬಂಧಿಸಿದಂತೆ ವಿಷಯ/ಮಾರ್ಗದರ್ಶಕರ ವಿವರಗಳನ್ನು ಸಿಂಡಿಕೇಟ್ ಸಭೆಗೆ ಮರುಮಂಡಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ ಶ್ರೀ ರಾಜಣ್ಣ. ಎಲ್ ಇವರಿಗೆ ಈಗಾಗಲೇ ರೂ. 25,000/–ಗಳ ವಿಶೇಷ ದಂಡಶುಲ್ಕದೊಂದಿಗೆ ಹೆಚ್ಚುವರಿಯಾಗಿ ಆರು ತಿಂಗಳ ಅವಧಿ ವಿಸ್ತರಣೆಯನ್ನು ನೀಡಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಈಗಾಗಲೇ ಇತರರಿಗೆ ವಿಧಿಸಿರುವಂತೆ ರೂ. 50,000/–ಗಳ ದಂಡಶುಲ್ಕದೊಂದಿಗೆ ಸದರಿ ಸಂಶೋಧಕರು ದಿನಾಂಕ 22–07–2020ರೊಳಗೆ ಸಂಶೋಧನಾ ಕಾರ್ಯ ಪೂರ್ಣಗೊಳಿಸಿಕೊಳ್ಳುವಂತೆ ತಿಳಿಸಬೇಕೆಂದು ಸೂಚಿಸಿದರು. ಹಾಗೆಯೇ |

| | |
|---|---|
| | ವಿಶ್ವವಿದ್ಯಾನಿಲಯದ ವತಿಯಿಂದ ಏಳು ವರ್ಷಗಳು ಪೂರೈಸಿದ ಸಂಶೋಧನಾ ವಿದ್ಯಾರ್ಥಿಗಳ ಅವಧಿಯನ್ನು ಮತ್ತೊಮ್ಮೆ ಸಂಶೋಧನಾ ಕಾರ್ಯ ವಿಸ್ತರಣೆ ಮಾಡುವಂತೆ ಶಿಫಾರಸ್ಸು ಸಲ್ಲಿಸಬಾರದೆಂದು ಎಲ್ಲಾ ಮಾರ್ಗದರ್ಶಕರುಗಳಿಗೆ ಕಡ್ಡಾಯವಾಗಿ ಸುತ್ತೋಲೆಯನ್ನು ಹೊರಡಿಸುವಂತೆ ತಿಳಿಸಿದರು. |
| **ತೀರ್ಮಾನ** | ಶ್ರೀ ರಾಜಣ್ಣ. ಎಲ್, ಸಂಶೋಧಕರು ಇವರು ಡಾ. ಕೆ.ಎನ್. ಗಂಗಾನಾಯಕ್‌ರವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿರುವುದನ್ನು ಹಾಗೂ ಈಗಾಗಲೇ ದಿನಾಂಕ 22–07–2020ರೊಳಗೆ ಸಂಶೋಧನಾ ಕಾರ್ಯ ಪೂರ್ಣಗೊಳಿಸಲು ಸದರಿ ವಿದ್ಯಾರ್ಥಿಗೆ ಸಭೆಯು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಗಮನಿಸಿತು ಮತ್ತು ಸದರಿ ವಿದ್ಯಾರ್ಥಿಗೆ ರೂ. 25,000/–ಗಳ ಬದಲಿಗೆ ರೂ. 50,000/– ದಂಡಶುಲ್ಕವನ್ನು ವಿಧಿಸಲು ತೀರ್ಮಾನಿಸಿತು.<br>ಮುಂದುವರೆದು, ಏಳು ವರ್ಷಗಳು ಪೂರೈಸಿದ ಸಂಶೋಧನಾ ವಿದ್ಯಾರ್ಥಿಗಳ ಸಂಶೋಧನಾ ಅವಧಿಯನ್ನು ಮುಂದುವರೆಸುವಂತೆ ವಿಷಯ ಮಂಡಿಸಬಾರದೆಂದು ಹಾಗೂ ಈ ಬಗ್ಗೆ ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸುವಂತೆ ಸುತ್ತೋಲೆಯನ್ನು ಹೊರಡಿಸಲು ಸಭೆಯು ತೀರ್ಮಾನಿಸಿತು. |
| **2020/2.3** | ದಿನಾಂಕ: 16–01–2020ರಂದು ಸನ್ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿ.ವಿ. ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರನ್ನೊಳಗೊಂಡ ಸಭೆಯ ನಡವಳಿ ಹಾಗೂ 'ವಿದ್ಯಾರ್ಥಿನಿಲಯಗಳ ಕೈಪಿಡಿ'ಗೆ ಸಿಂಡಿಕೇಟ್ ಅನುಮೋದನೆಯನ್ನು ಪಡೆಯುವ ಬಗ್ಗೆ. |
| | ಶ್ರೀಮತಿ ಸಿಂಧು ಸುರೇಶ್‌ರವರು ಮಾತನಾಡಿ, ವಿದ್ಯಾರ್ಥಿನಿಲಯಗಳ ಕೈಪಿಡಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಆಪ್‌ಲೋಡ್ ಮಾಡಬೇಕೆಂದು ಹಾಗೂ ಸದರಿ ಕೈಪಿಡಿಯನ್ನು ಆಂಗ್ಲಭಾಷೆಯಲ್ಲಿಯೂ ಪ್ರಕಟಿಸಬೇಕೆಂದು ತಿಳಿಸಿದರು.<br><br>ಡಾ. ಈ.ಸಿ. ನಿಂಗರಾಜ್‌ಗೌಡರವರು ಮಾತನಾಡಿ, ವಿದ್ಯಾರ್ಥಿನಿಲಯಗಳ ಸಂಪರ್ಕಾಧಿಕಾರಿ ಹುದ್ದೆಯು ಮಂಜೂರಾತಿ ಹುದ್ದೆಯೇ ಎಂದು ಪ್ರಶ್ನಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸಂಪರ್ಕಾಧಿಕಾರಿಗಳ ಹುದ್ದೆಯು ಸರ್ಕಾರದಿಂದ ಮಂಜೂರಾದ ಹುದ್ದೆಯಾಗಿರುವುದಿಲ್ಲ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಕುಂದುಕೊರತೆಗಳು ಮತ್ತು ನ್ಯೂನತೆಗಳನ್ನು ಸರಿಪಡಿಸಲು ಆ ಹುದ್ದೆಯನ್ನು ಸೃಷ್ಟಿಸಿದ್ದು, ಈಗಾಗಲೇ ಶೇಕಡ 50ರಷ್ಟು ಸಮಸ್ಯೆಗಳು ನಿವಾರಣೆಯಾಗಿವೆಯೆಂದು ತಿಳಿಸಿದರು.<br><br>ಡಾ. ಈ.ಸಿ. ನಿಂಗರಾಜ್‌ಗೌಡರವರು ಮಾತನಾಡಿ, ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಪೂರ್ಣಕಾಲಿಕವಾಗಿ ವಾರ್ಡನ್‌ಗಳನ್ನು ನೇಮಕ ಮಾಡಬೇಕೆಂದು ಕೋರಿದರು.<br><br>ಎಲ್ಲಾ ವಿದ್ಯಾರ್ಥಿನಿಲಯಗಳಲ್ಲೂ ಖಾಯಂ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದು, ಪೂರ್ಣಕಾಲಿಕ ವಾರ್ಡನ್‌ಗಳನ್ನು ನೇಮಕ ಮಾಡುವ ಬಗ್ಗೆ ಮುಂದಿನ ಸಿಂಡಿಕೇಟ್‌ನಲ್ಲಿ ವಿಷಯ ಮಂಡಿಸಲಾಗುವುದೆಂದು ತಿಳಿಸಿದರು. ಮುಂದುವರೆದು, ವಿಶ್ವವಿದ್ಯಾನಿಲಯದಲ್ಲಿ Centralized/ Common Kitchen ವ್ಯವಸ್ಥೆ ಜಾರಿಗೆ ತಂದು ಒಂದೇ ಕಡೆ ಆಹಾರವನ್ನು ತಯಾರಿಸಿ, 3–4 ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡುವ ವ್ಯವಸ್ಥೆಯನ್ನು ಮಾಡುವುದು ಹಾಗೂ ಸರಬರಾಜು ಮಾಡಲು ಟೆಂಡರ್ ಕರೆದು ಒಂದು ವಾಹನವನ್ನು ಖರೀದಿಸುವುದು. ಇದರಿಂದ ಅಡುಗೆ ಸಿಬ್ಬಂದಿಗಳ ವೇತನದಿಂದ ಉಂಟಾಗುತ್ತಿರುವ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುವುದೆಂದು ಮಾನ್ಯ ಕುಲಪತಿಯವರು ತಿಳಿಸಿದರು.<br><br>ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ ವಿದ್ಯಾರ್ಥಿನಿಲಯಗಳಲ್ಲಿ ವಾಸ ಮಾಡುತ್ತಿರುವವರ ವಿದ್ಯಾರ್ಥಿಗಳ ಪಟ್ಟಿ ಇದೆಯೇ ಎಂದು ಕೇಳಿದರು.<br>ಮಾನ್ಯ ಕುಲಪತಿಯವರು ಮಾತನಾಡಿ, ಎಲ್ಲಾ ವಿದ್ಯಾರ್ಥಿನಿಲಯಗಳಲ್ಲೂ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಮುಂದಿನ ದಿನಗಳಲ್ಲಿ ಅನಧಿಕೃತ ವ್ಯಕ್ತಿಗಳು |

| | |
|---|---|
| | ಅನಾವಶ್ಯಕವಾಗಿ ಮಾನಸಗಂಗೋತ್ರಿ ಆವರಣವನ್ನು ಪ್ರವೇಶಿಸದಂತೆ ಮತ್ತು ಅಧ್ಯಾಪಕರು, ಅಧ್ಯಾಪಕೇತರ ವರ್ಗದವರಿಗೆ ಮತ್ತು ವಿದ್ಯಾರ್ಥಿಗಳ ವಾಹನಗಳಿಗೆ sticker ಗಳನ್ನು ವಿತರಿಸಲಾಗುವುದೆಂದು ತಿಳಿಸಿದರು. ಪ್ರಾಥಮಿಕವಾಗಿ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿಯನ್ನು ನೀಡಿ, ತದನಂತರ ಬಯೋಮೆಟ್ರಿಕ್ ವ್ಯವಸ್ಥೆಯನ್ನು ವಿದ್ಯಾರ್ಥಿನಿಲಯಗಳಲ್ಲಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.<br><br>ಡಾ. ಈ.ಸಿ. ನಿಂಗರಾಜ್‌ಗೌಡರವರು ಮಾತನಾಡಿ, ವಿದ್ಯಾರ್ಥಿಕ್ಷೇಮಪಾಲನ ಕಛೇರಿ ಡೀನ್‌ರವರನ್ನು ಒಳಗೊಂಡಂತೆ ಒಂದು ಉಪಸಮಿತಿಯನ್ನು ರಚಿಸುವಂತೆ ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ಎಲ್ಲಾ ವಿದ್ಯಾರ್ಥಿಗಳಿಗೆ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ವಿತರಿಸುವಂತೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ತೆರವುಗೊಳಿಸುವಂತೆ ಕ್ರಮಕೈಗೊಳ್ಳಬೇಕೆಂದು ಕೋರಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಅನಧಿಕೃತ ವ್ಯಕ್ತಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ನೀಡಬಾರದೆಂದು ಈಗಾಗಲೇ ಸುತ್ತೋಲೆಯನ್ನು ಹೊರಡಿಸಲಾಗಿದೆ. ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತ ವ್ಯಕ್ತಿಗಳು ವಾಸ ಮಾಡಲು ಅವಕಾಶ ಕಲ್ಪಿಸಿರುವ ಬಗ್ಗೆ ತಮಗೆ ಅಧಿಕೃತ ಮಾಹಿತಿ ಲಭ್ಯವಿರುವುದಿಲ್ಲ. ಒಂದು ವೇಳೆ ತಮ್ಮ ಗಮನಕ್ಕೆ ಬಂದಲ್ಲಿ, ಅನಧಿಕೃತ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದು ಮತ್ತು ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಬರೆಸಿಕೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | ದಿನಾಂಕ: 16–01–2020ರಂದು ಸನ್ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿ.ವಿ. ವಿದ್ಯಾರ್ಥಿನಿಲಯಗಳ ಶಿಕ್ಷಕ ಸಲಹೆಗಾರರನ್ನೊಳಗೊಂಡ ಸಭೆಯ ನಡವಳಿ ಹಾಗೂ 'ವಿದ್ಯಾರ್ಥಿನಿಲಯಗಳ ಕೈಪಿಡಿ'ಗೆ ಸಿಂಡಿಕೇಟ್ ಅನುಮೋದಿಸಿತು. |
| **2020/2.4** | ಮೈಸೂರು ವಿಶ್ವವಿದ್ಯಾನಿಲಯವು ಆಡಳಿತ ತರಬೇತಿ ಸಂಸ್ಥೆ (ATI), ಕರ್ನಾಟಕ ಸರ್ಕಾರ, ಮೈಸೂರು ಇವರ ಜೊತೆ Massive Open Online Courses (MOOC) ಯೋಜನೆಯಡಿ ಸರ್ಟಿಫಿಕೆಟ್ ಮತ್ತು ಡಿಪ್ಲೊಮೊ ಕೋರ್ಸ್‌ಗಳನ್ನು ಆಯೋಜಿಸುವ ಬಗ್ಗೆ ಮಾಡಿಕೊಂಡಿರುವ ಒಡಂಬಡಿಕೆ (MOU) ಸಂಬಂಧದ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯವು ಆಡಳಿತ ತರಬೇತಿ ಸಂಸ್ಥೆ (ATI), ಕರ್ನಾಟಕ ಸರ್ಕಾರ, ಮೈಸೂರು ಇವರೊಡನೆ Massive Open Online Courses (MOOC) ಯೋಜನೆಯಡಿ ಸರ್ಟಿಫಿಕೆಟ್ ಮತ್ತು ಡಿಪ್ಲೊಮೊ ಕೋರ್ಸ್‌ಗಳನ್ನು ಆಯೋಜಿಸುವ ಬಗ್ಗೆ ಮಾಡಿಕೊಂಡಿರುವ ಒಡಂಬಡಿಕೆ(MOU)ಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/2.5** | School of Planning and Architecture, UOM and Centre for Science and Environment (CSE), New Delhi ಇವುಗಳ ನಡುವೆ "Technical, Advisory Knowledge and Capacity Building Support for Sustainability Related Reforms in Curriculum" ವಿಷಯದಲ್ಲಿ ಎರಡು ವರ್ಷಗಳ ಅವಧಿಗೆ ಒಡಂಬಡಿಕೆ ನವೀಕರಣ ಮಾಡಿಕೊಳ್ಳುವ ಬಗ್ಗೆ. |
| **ತೀರ್ಮಾನ** | School of Planning and Architecture, UOM and Centre for Science and Environment (CSE), New Delhi ಇವುಗಳ ನಡುವೆ "Technical, Advisory Knowledge and Capacity Building Support for Sustainability Related Reforms in Curriculum" ವಿಷಯದಲ್ಲಿ ಎರಡು ವರ್ಷಗಳ ಅವಧಿಗೆ ಒಡಂಬಡಿಕೆ ನವೀಕರಣ ಮಾಡಿಕೊಂಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2020/2.6** | ಕೇಂದ್ರ ಲೆಕ್ಕಪರಿಶೋಧನ ಕಛೇರಿಯಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಕೆಯಾಗಿರುವ ಆಡಿಟ್ ವಿಚಾರಣೆಗಳ ಸಂಬಂಧ ಈವರೆಗೆ ಸರ್ಕಾರ/ಸಿ.ಎ.ಜಿ ಕಛೇರಿಯಿಂದ ಬಂದಿರುವ ನಿರ್ದೇಶನದಂತೆ ಕ್ರಮ ಕೈಗೊಳ್ಳುವ ಬಗ್ಗೆ. |
| **ತೀರ್ಮಾನ** | ಕಾರ್ಯಸೂಚಿಯಲ್ಲಿನ ವಿಷಯವನ್ನು ಪರಾಮರ್ಶಿಸಿ ಕೂಲಂಕಷವಾಗಿ ಚರ್ಚಿಸಿದ ಸಿಂಡಿಕೇಟ್, ಸಿ.ಎ.ಜಿ. (ಕಂಟ್ರೋಲರ್ ಆಡಿಟ್ ಜನರಲ್ ಆಫ್ ಇಂಡಿಯಾ) ವಿಧಿಸಿರುವ ಆಕ್ಷೇಪಣೆಗಳಿಗೆ ನಿಯಮಾನುಸಾರ ಸಮರ್ಥನೀಯ ಉತ್ತರಗಳನ್ನು ಸಲ್ಲಿಸಿ ಕೈಬಿಡಬಹುದಾದ ಪ್ರಕರಣಗಳಡಿಯಲ್ಲಿ ಬರುವ ನಿವೃತ್ತರಾದಂತಹ ಉದ್ಯೋಗಿಗಳಿಗೆ ನಿವೃತ್ತಿ ವೇತನ/ಪಿಂಚಣಿ ಸೌಲಭ್ಯಗಳನ್ನು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ನಿಯಮಾನುಸಾರ ಲಭ್ಯವಾಗುವ ಪರಿಷ್ಕೃತ ವೇತನವನ್ನು ಸೂಕ್ತ ಮುಚ್ಚಳಿಕೆಯನ್ನು ಪಡೆದು ವಿಸ್ತರಿಸಲು ಸಿಂಡಿಕೇಟ್ ತೀರ್ಮಾನಿಸಿತು. ಮತ್ತು ಈ ವಿಷಯವಾಗಿ ಕೈಗೊಂಡ ಕ್ರಮದ ಬಗ್ಗೆ ಪೂರ್ಣ ವಿವರಗಳೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/2.7** | ಹಿಂದಿ ಅಧ್ಯಯನ ವಿಭಾಗ, ಸಂಸ್ಕೃತ ಅಧ್ಯಯನ ವಿಭಾಗ ಮತ್ತು ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಈ ಮೂರು ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಪ್ರತಿಭಾ. ಆರ್ ಮೊದಲಿಯಾರ್, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿಭಾಗಾಧ್ಯಕ್ಷರ ಅವಧಿಯು ದಿನಾಂಕ 15-03-2020ಕ್ಕೆ ಅಂತ್ಯಗೊಳ್ಳುತ್ತದೆ ಆದರೆ ಸದರಿ ಅಧ್ಯಯನ ವಿಭಾಗದಲ್ಲಿ ಖಾಯಂ ಪ್ರಾಧ್ಯಾಪಕರಾಗಲಿ/ಸಹ ಪ್ರಾಧ್ಯಾಪಕರಾಗಲಿ ಇರುವುದಿಲ್ಲ. ಡಾ. ಎಂ. ವಾಸಂತಿಯವರು ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.<br>ಡಾ. ಕೆ. ನಾರಾಯಣ ಭಟ್ಟ, ಸಂಸ್ಕೃತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿಭಾಗಾಧ್ಯಕ್ಷರ ಅವಧಿಯು ದಿನಾಂಕ 07-03-2020ಕ್ಕೆ ಅಂತ್ಯಗೊಳ್ಳುತ್ತದೆ. ಡಾ. ಕೆ. ನಾರಾಯಣ ಭಟ್ಟರನ್ನು ಹೊರತುಪಡಿಸಿ ಬೇರೆ ಯಾವುದೇ ಖಾಯಂ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ ಸಹಾಯಕ ಪ್ರಾಧ್ಯಾಪಕರು ಇರುವುದಿಲ್ಲ. ಈ ವಿಭಾಗಗಳಲ್ಲಿ ಸೇವೆಸಲ್ಲಿಸುತ್ತಿರುವ ಪ್ರಾಧ್ಯಾಪಕರು 2021ರಲ್ಲಿ ನಿವೃತ್ತಿಹೊಂದಲಿದ್ದಾರೆ. ಆದ್ದರಿಂದ ಇವರುಗಳನ್ನೇ ಸದ್ಯ ಆಯಾ ವಿಭಾಗಗಳಲ್ಲಿ ಮುಂದುವರೆಸಲು ಹಾಗೂ<br>ಪ್ರೊ. ಎಸ್. ಲೀಲಾವತಿ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿಭಾಗಾಧ್ಯಕ್ಷರ ಅವಧಿಯು ದಿನಾಂಕ 18-03-2020ಕ್ಕೆ ಅಂತ್ಯಗೊಳ್ಳುತ್ತದೆ. ನಂತರ ಜೇಷ್ಠತೆಯಲ್ಲಿ ಡಾ. ಎಂ.ಎಸ್. ಶಾರದ, ಪ್ರಾಧ್ಯಾಪಕರು ಹಿರಿಯರಾಗಿರುವುದರಿಂದ ಅವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರನ್ನಾಗಿ ಮುಂದುವರೆಸಲು ಸಿಂಡಿಕೇಟ್‌ನ ತೀರ್ಮಾನಕ್ಕಾಗಿ ವಿಷಯ ಮಂಡಿಸಲಾಗಿದೆಯೆಂದು ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿ ನೀಡಿದರು. |
| **ತೀರ್ಮಾನ** | ಹಿಂದಿ ಅಧ್ಯಯನ ವಿಭಾಗದಲ್ಲಿ ಮತ್ತು ಸಂಸ್ಕೃತ ಅಧ್ಯಯನ ವಿಭಾಗಗಳಲ್ಲಿ ಖಾಯಂ ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರಾಗಲೀ ಇಲ್ಲದ ಕಾರಣ, ಕ್ರಮವಾಗಿ ಪ್ರೊ. ಪ್ರತಿಭಾ. ಆರ್ ಮೊದಲಿಯಾರ್, ಪ್ರಾಧ್ಯಾಪಕರು ಇವರನ್ನು ಹಿಂದಿ ಅಧ್ಯಯನ ವಿಭಾಗಕ್ಕೆ ಹಾಗೂ ಡಾ. ಕೆ. ನಾರಾಯಣ ಭಟ್ಟ, ಪ್ರಾಧ್ಯಾಪಕರು ಇವರನ್ನು ಸಂಸ್ಕೃತ ಅಧ್ಯಯನ ವಿಭಾಗಕ್ಕೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಅಡಿಯಲ್ಲಿ ಪ್ರಾಧ್ಯಾಪಕರು ಇವರನ್ನು ವಿಭಾಗಾಧ್ಯಕ್ಷರನ್ನಾಗಿ ಎರಡು ವರ್ಷಗಳ ಅವಧಿಗೆ ಅಥವಾ **ನಿವೃತ್ತಿಯ ದಿನಾಂಕದವರೆಗೆ** ಅಥವಾ ವಿಶ್ವವಿದ್ಯಾನಿಲಯದ **ಮುಂದಿನ ಆದೇಶದವರೆಗೆ** ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೇಮಕ ಮಾಡಿ ಮುಂದುವರೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.<br>ಮುಂದುವರೆದು, ಪ್ರೊ. ಎಸ್. ಲೀಲಾವತಿ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿಭಾಗಾಧ್ಯಕ್ಷರ ಅವಧಿಯು ದಿನಾಂಕ 18-03-2020ಕ್ಕೆ ಅಂತ್ಯಗೊಳ್ಳಲಿದ್ದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಅಡಿಯಲ್ಲಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ವಿಭಾಗದ ಜೇಷ್ಠತೆಯಲ್ಲಿ |

| | |
|---|---|
| | ಹಿರಿಯರಾಗಿರುವ ಡಾ. ಎಂ.ಎಸ್.ಶಾರದ, ಪ್ರಾಧ್ಯಾಪಕರು ಇವರನ್ನು ವಿಭಾಗಾಧ್ಯಕ್ಷರನ್ನಾಗಿ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/2.8** | Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| | ಡಾ. ಈ.ಸಿ. ನಿಂಗರಾಜ್‌ಗೌಡರವರು ಕರಡು ಅಧಿನಿಯಮ Sl.No. 6 Creation of Posts: B. Non-Teaching Staff (d) Library Attendant ಬದಲು Library Assistant ಎಂದು ನಾಮಾಂಕಿತ ಬದಲಾವಣೆ ಮಾಡಬೇಕೆಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಸದರಿ ವಿಷಯವನ್ನು ಚರ್ಚಿಸಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | Center for the Study of Social Exclusion and Inclusive Policy ಕೇಂದ್ರಕ್ಕೆ ಸಂಬಂಧಿಸಿದ ಕರಡು ಅಧಿನಿಯಮವನ್ನು ಅನುಮೋದಿಸಿದ ಸಭೆಯು ಮಾನ್ಯ ಕುಲಾಧಿಪತಿಗಳ ಅಂಕಿತ ಪಡೆಯುವ ಸಲುವಾಗಿ ಸರ್ಕಾರಕ್ಕೆ ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/2.9** | ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಸಿಂಧು ಸುರೇಶ್‌ರವರು ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ. |
| | ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಸಿಂಧು ಸುರೇಶ್‌ರವರು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳ ಬೋಧನಾ ಕಾರ್ಯಭಾರಗಳ ವಿವರ ಹಾಗೂ ಪತ್ರಿಕೋದ್ಯಮ ಮತ್ತು ಸಂವಹನ ಅಧ್ಯಯನ ವಿಭಾಗದ ವೇಳಾಪಟ್ಟಿ ಬದಲಾವಣೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡದಿರುವ ಬಗ್ಗೆ ಮತ್ತು ನಾಲ್ಕು ಅತಿಥಿ ಉಪನ್ಯಾಸಕರುಗಳಿಗೆ ನೀಡಲಾಗುತ್ತಿರುವ ಮಾಹೆಯಾನ ವೇತನ ತಲಾ ರೂ. 12,000/-ಗಳಿರುತ್ತವೆ. ಇದರ ಬದಲು ಹಾಲಿ ಸಂಶೋಧನಾ ವಿದ್ಯಾರ್ಥಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಸಂಶೋಧಕರುಗಳನ್ನೇ ಬೋಧನಾಕಾರ್ಯಕ್ಕೆ ನೇಮಕ ಮಾಡುವುದು ಸೂಕ್ತವೆಂದು ಹಾಗೂ ಮಹಿಳೆಯರ ಸಮಸ್ಯೆಗಳನ್ನು ಸಮಗ್ರವಾಗಿ ನಿರ್ವಹಿಸಲು ಬೋಧಕ ವರ್ಗ, ಬೋಧಕೇತರ ವರ್ಗ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರನ್ನೊಳಗೊಂಡಂತೆ ವೇದಿಕೆಯನ್ನು ರಚಿಸಬೇಕೆಂದು ಲಿಖಿತ ಪ್ರಸ್ತಾವನೆಯನ್ನು ಸಲ್ಲಿಸುವುದರೊಂದಿಗೆ ಸಭೆಯಲ್ಲಿ ಪ್ರಸ್ತಾಪಿಸುತ್ತಾ ಕೋರಿದರು. |
| **ತೀರ್ಮಾನ** | ಸದರಿ ಪ್ರಸ್ತಾವನೆಯನ್ನು ಗಮನಿಸಲಾಯಿತು ಹಾಗೂ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದಲ್ಲಿ ಹಂಚಿಕೆಯಾಗಿರುವ ಬೋಧನಾ ಕಾರ್ಯಭಾರದ ವಿವರವನ್ನು ಕೂಡಲೇ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **2020/2.10** | ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ ಸರ್ಕಾರವು ತಿದ್ದುಪಡಿ ಮಾಡಿರುವ ಕಾಯ್ದೆಯನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳುವ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ ಸಂಯೋಜನೆ ನೀಡುವ ಸಂಬಂಧ ಸರ್ಕಾರವು ತಿದ್ದುಪಡಿ ಮಾಡಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ಅಳವಡಿಸಿಕೊಳ್ಳುವಂತೆ ಸೂಚಿಸಿರುವ ಕಾಯ್ದೆಯನ್ನು ಪರಾಮರ್ಶಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದಲ್ಲಿ ಅದನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಿತು. |
| **2020/2.11** | ದೂರಶಿಕ್ಷಣದಡಿಯಲ್ಲಿ ನೂತನ ಕಲಿಕಾ ಕೇಂದ್ರದ ಸಂಯೋಜನೆಯ ಸ್ಥಳೀಯ ತಪಾಸಣಾ ಸಮಿತಿ 2019-20ರ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವ ಬಗ್ಗೆ. |

| | |
|---|---|
| **ತೀರ್ಮಾನ** | ಸ್ಥಳೀಯ ತಪಾಸಣಾ ಸಮಿತಿ 2019–20ರ ವರದಿಯ ಮೇರೆಗೆ ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಪದ್ಧತಿಯಲ್ಲಿ ಮೂರು ವರ್ಷಗಳಿಗೆ ಮಾತ್ರ ಅನ್ವಯವಾಗುವಂತೆ 17 ಕಲಿಕಾ ಕೇಂದ್ರಗಳಿಗೆ ಸಂಯೋಜನೆಯನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/2.12** | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಗೆ ಡಾ. ಎಸ್. ಮದಿಅಳಗನ್, ಡೀನರು, ಶಿಕ್ಷಣ ನಿಕಾಯ ಇವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವ ಬಗ್ಗೆ –ಅನುಸಮರ್ಥನೆಗಾಗಿ |
| **ತೀರ್ಮಾನ** | ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿಗೆ ಡಾ. ಎಸ್. ಮದಿಅಳಗನ್, ಡೀನರು, ಶಿಕ್ಷಣ ನಿಕಾಯ ಇವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2020/2.13** | IIFA Lancaster Degree College, Mysuru ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 04 ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸಲು ಮಾನ್ಯತೆ ನೀಡುವ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಿಂದ ಮಾನ್ಯತೆ ನೀಡಲು ಪರಿವೀಕ್ಷಣಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನನ್ವಯ, IIFA Lancaster Degree College, Mysuru ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸದಾಗಿ 1) B.Sc (Game Designing & Development) 2) B.Sc. (Animation & Multimedia) 3) B.Sc. (Visual Communication) and 4) M.Sc. (Interior Design & Management) ಕೋರ್ಸ್‌ಗಳನ್ನು ಪ್ರಾರಂಭಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2020/2.14** | Ayur Matam Academic Institute of Ayurveda & Yogic Sciences, Mysuru ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳ ನಾಮಾಂಕಿತದಲ್ಲಿ ಬದಲಾವಣೆ ಮಾಡುವ ಬಗ್ಗೆ. |
| **ತೀರ್ಮಾನ** | Ayur Matam Academic Institute of Ayurveda & Yogic Sciences, Mysuru **ಇವರ ಸಂಸ್ಥೆಯಲ್ಲಿ** Specialized Programme ಅಡಿಯಲ್ಲಿ ಮಾನ್ಯತೆ ಪಡೆದಿರುವ ಐದು ಕೋರ್ಸುಗಳ ನಾಮಾಂಕಿತವನ್ನು ಬದಲಾವಣೆ ಮಾಡಿ, ಮತ್ತೊಮ್ಮೆ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು. |
| **2020/2.15** | ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಈ.ಸಿ. ನಿಂಗರಾಜ್‌ಗೌಡ ಅವರು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕೋರಲಾಗಿದ್ದ ಪ್ರಸ್ತಾವನೆಗಳಿಗೆ ಮಾಹಿತಿ ನೀಡಿರುವ ಬಗ್ಗೆ. |
| ತೀರ್ಮಾನ | ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಈ.ಸಿ. ನಿಂಗರಾಜ್‌ಗೌಡ ಅವರು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕೋರಲಾಗಿದ್ದ ಪ್ರಸ್ತಾವನೆಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಪೂರ್ಣ ಪ್ರಮಾಣದಲ್ಲಿ ನೀಡಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. |
| **2020/2.16** | International College of Financial Planning, Mysuru, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೆಚ್ಚುವರಿಯಾಗಿ 03 ಕೋರ್ಸುಗಳನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ ಕ್ರಮ ಕೈಗೊಂಡಿರುವ ಬಗ್ಗೆ – ಅನುಸಮರ್ಥನೆಗಾಗಿ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನುಸಾರ International College of Financial Planning, Mysuru ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೊಸದಾಗಿ |

| | |
|---|---|
| | 1. M.Com (Financial Planning) with an intake of sixty (60)<br>2. M.Com (Financial Analysis) with an intake of forty (40)<br>3. M.A. (Fashion Entrepreneurship) with an intake of forty (40) ಹೆಚ್ಚುವರಿ ಕೋರ್ಸುಗಳನ್ನು 2020–21ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಕ್ರಮಕೈಗೊಂಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

**ಇತರೆ ವಿಷಯಗಳು:**

1. ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸದಸ್ಯರಿಗೆ ಒಂದು ವಾರದಲ್ಲಿ ತಲುಪುವಂತೆ ವ್ಯವಸ್ಥೆ ಮಾಡಬೇಕೆಂದು ಡಾ. ಈ.ಸಿ. ನಿಂಗರಾಜ್‌ಗೌಡ ಹಾಗೂ ಶ್ರೀಮತಿ ಸಿಂಧು ಸುರೇಶ್, ಸಿಂಡಿಕೇಟ್ ಸದಸ್ಯರುಗಳು ಕೋರಿದರು.
2. ಮೈಸೂರು ವಿಶ್ವವಿದ್ಯಾನಿಲಯದ 100ನೇ ವಾರ್ಷಿಕ ಘಟಿಕೋತ್ಸವದ ಅಂಗವಾಗಿ ವಿಶೇಷ ಲಾಂಛನವನ್ನು ವಿಶ್ವವಿದ್ಯಾನಿಲಯದ ಎಲ್ಲಾ ಪದವಿ/ಡಿಪ್ಲೊಮಾ ಕೋರ್ಸ್‌ಗಳ ಪ್ರಮಾಣ ಪತ್ರಗಳಿಗೆ ಮುದ್ರಿಸಲಾಗುವುದೆಂದು ಮಾನ್ಯ ಕುಲಪತಿಯವರು ತಿಳಿಸಿದರು. ಸದರಿ ಸರ್ಟಿಫಿಕೇಟ್‌ಗಳಿಗೆ ಮುದ್ರಿಸಲಾಗುವ ಲಾಂಛನವನ್ನು ರಾಜಮಾತೆ ಡಾ. ಪ್ರಮೋದಾದೇವಿ ಒಡೆಯರ್, ಮೈಸೂರು ಅರಮನೆ, ಮೈಸೂರು ರವರು ಸಿದ್ಧಪಡಿಸಿ ಕೊಡುವುದಾಗಿ ತಿಳಿಸಿರುತ್ತಾರೆಂದು ಸಭೆಗೆ ಮಾಹಿತಿ ನೀಡಿದರು.
3. ಮೈಸೂರು ವಿಶ್ವವಿದ್ಯಾನಿಲಯದ 100ನೇ ವಾರ್ಷಿಕ ಘಟಿಕೋತ್ಸವದ ಸ್ಮರಣಾರ್ಥವಾಗಿ Centenary Convocation Hallನ ನಿರ್ಮಾಣಕ್ಕೆ ಪ್ರಯತ್ನ ಮಾಡಲಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು.
4. ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ Statutes, Ordinance, Rules upload ಮಾಡಬೇಕೆಂದು ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಸಿಂಧು ಸುರೇಶ್‌ರವರು ಕೋರಿದರು.
5. ಡಾ. ಈ.ಸಿ. ನಿಂಗರಾಜ್‌ಗೌಡ, ಸಿಂಡಿಕೇಟ್ ಸದಸ್ಯರು ಇವರು ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ಗುರುತಿನ ಚೀಟಿಯನ್ನು ವಿತರಿಸಬೇಕೆಂದು ಕೋರಿದರು.
6. Ph.D, NET/SLET ಪದವಿ ಹೊಂದಿರುವಂತಹ ಅತಿಥಿ ಉಪನ್ಯಾಸಕರನ್ನು ಮಾತ್ರ ಮುಂದಿನ ಶೈಕ್ಷಣಿಕ ವರ್ಷದಿಂದ ನೇಮಕ ಮಾಡಿಕೊಳ್ಳಬೇಕೆಂದು ಸಿಂಡಿಕೇಟ್ ಸದಸ್ಯರಾದ ಡಾ. ಈ.ಸಿ. ನಿಂಗರಾಜ್‌ಗೌಡ, ಸಭೆಗೆ ತಿಳಿಸಿದರು.
7. ಡಾ. ಎಂ.ಎಸ್. ದಾಮೋದರ, ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾನಿಲಯದ 100ನೇ ಘಟಿಕೋತ್ಸವದ ಸ್ಮರಣಾರ್ಥವಾಗಿ ಶ್ರೀ ಸರ್. ಎಂ. ವಿಶ್ವೇಶ್ವರಾಯ ಅವರ ಪುತ್ಥಳಿಯನ್ನು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸುವಂತೆ ಸಭೆಗೆ ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

| | |
|---|---|
| ಸಹಿ/– | ಸಹಿ/– |
| **ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿ ಮತ್ತು ಅಧ್ಯಕ್ಷರು** |